# ಐಎಸ್‌ಐ ಚಿಹ್ನೆ ದುರ್ಬಳಕೆ ವಿರುದ್ಧ ಕ್ರಮ

Vijayavani 16/7/2016

» ಕ್ರಿಮಿನಲ್ ಪ್ರಕರಣ ದಾಖಲಿಸಲು ಸಿದ್ಧತೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಭಾರತೀಯ ಗುಣಮಟ್ಟ ಮೌಲ್ಯಮಾಪನ ಸಿಬ್ಬಂದಿ, ಐಎಸ್‌ಐ ಚಿಹ್ನೆಯ ದುರುಪಯೋಗ ಹಾಗೂ ನಕಲಿ ವಸ್ತುಗಳ ಮಾರಾಟದ ವಿರುದ್ಧ ಶೋಧ ಕಾರ್ಯ ಆರಂಭಿಸಿದ್ದಾರೆ.

ಹೊಸಕೋಟೆಯಲ್ಲಿ ಕುಡಿಯುವ ನೀರು ಪೂರೈಸುತ್ತಿದ್ದ ಅನಿಕಾ ಆಕ್ವಾ ಸಂಸ್ಥೆ ಮೇಲೆ ಇತ್ತೀಚೆಗೆ ಅಧಿಕಾರಿಗಳು ದಾಳಿ ನಡೆಸಿ ಐಎಸ್‌ಐ ಚಿಹ್ನೆ ದುರ್ಬಳಕೆ ಮಾಡಿಕೊಂಡು ಅನಿಕಾ ಆಕ್ವಾ ಹಾಗೂ ಶ್ರೀ ಕೃಷ್ಣ ಕ್ರಿಸ್ಟಲ್ ಆಕ್ವಾ ಹೆಸರಿನಲ್ಲಿ 20 ಲೀಟರ್ ನೀರಿನ ಬಾಟಲ್‌ಗಳನ್ನು ಮಾರಾಟ ಮಾಡುತ್ತಿದ್ದುದನ್ನು ಪತ್ತೆಹಚ್ಚಿದ್ದಾರೆ. ಐಎಸ್‌ಐ ಮಾರ್ಕ್ ದುರ್ಬಳಕೆ ಮಾಡುವ ಸಂಸ್ಥೆ ವಿರುದ್ಧ ಭಾರತೀಯ ಗುಣಮಟ್ಟ ಪರಿಶೀಲನಾ ಕಾಯ್ದೆ 1986ರ ಸೆಕ್ಷನ್ 33ರ ಪ್ರಕಾರ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು. ಕಾಯ್ದೆಯ ಪ್ರಕಾರ 1 ವರ್ಷ ಜೈಲು ಶಿಕ್ಷೆ ಹಾಗೂ 50 ಸಾವಿರ ರೂ. ವರೆಗೆ ದಂಡ ವಿಧಿಸಲು ಅವಕಾಶವಿದೆ.